ಕರ್ನಾಟಕ ಸರ್ಕಾರ

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಚಿಕ್ಕಮಗಳೂರು,

2021-22

# ಪರ್ಯಾಯ ಶೈಕ್ಷಣಿಕ ಯೋಜನೆ

ವಿಷಯ:- ಕನ್ನಡ

ತರಗತಿ:-6ನೇ ತರಗತಿ

ರಚನೆಗೆ ಸಹಕಾರ:- ನ.ರಾ.ಪುರ. ಶೈಕ್ಷಣಿಕ ವಲಯ

ಪರಿಕಲ್ಪನೆ ಮತ್ತು ಮಾರ್ಗದರ್ಶನ

ಪ್ರಾಂಶುಪಾಲರು

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ

ರಾಮನಹಳ್ಳಿ, ಚಿಕ್ಕಮಗಳೂರು

Design by Sathyaprakash R M Art Teacher

# ಪರಿವಿಡಿ


| ಕ್ರ. ಸಂ. | ಅಧ್ಯಾಯಗಳು | ಪುಟ ಸಂಖ್ಯೆ |
|---|---|---|
| 01. | ದೊಡ್ಡವರ ದಾರಿ | 3–5 |
| 02. | ಕೃಷ್ಣ ಸುಧಾಮ | 6–9 |
| 03. | ಡಾ.ರಾಜಕುಮಾರ್ | 10–12 |
| 04. | ಬೇಸಿಗೆ | 13–15 |
| 05. | ಮಂಗಳ ಗ್ರಹದಲ್ಲಿ ಪುಟ್ಟಿ | 16–18 |
| 06. | ಗಂಧರ್ವ ಸೇನ | 19–21 |


DIET CHIKKA...

**ಪ್ರಾಂಶುಪಾಲರು, ಡಯಟ್ ಹಾಗೂ ಉಪನಿರ್ದೇಶಕರು(ಅಭಿವೃದ್ಧಿ)ರವರ ಕಾರ್ಯಾಲಯ-ಚಿಕ್ಕಮಗಳೂರು**

**ಪರ್ಯಾಯ ಶೈಕ್ಷಣಿಕ ಕ್ರಿಯಾಯೋಜನೆ**

ತರಗತಿ – 6. **ಅಭ್ಯಾಸದ ಹಾಳೆ-1 ಕಲಿಕಾಂಶ ಚಟುವಟಿಕೆ** ವಿಷಯ – ಕನ್ನಡ.

**ಪಾಠ: 1 : ದೊಡ್ಡವರ ದಾರಿ**

**ಸೂಚನೆಗಳು:**
* ಗದ್ಯಭಾಗವನ್ನು ಸ್ಪಷ್ಟವಾಗಿ ಗಟ್ಟಿಯಾಗಿ ಓದುವುದು.
* ಸರಳ ವ್ಯಕ್ತಿತ್ವವನ್ನು ನಿಮ್ಮದೇ ಮಾತುಗಳಲ್ಲಿ ಹಿರಿಯರಲ್ಲಿ ವ್ಯಕ್ತಪಡಿಸಿ.
* ಗದ್ಯದಲ್ಲಿ ಬಂದಿರುವ ಹೊಸ ಪದಗಳಿಗೆ ಅರ್ಥವನ್ನು ಶಬ್ಧಕೋಶದ ಸಹಾಯದಿಂದ ಹುಡುಕಿ ಅರ್ಥೈಸಿಕೊಳ್ಳುವುದು.
* ಸಂವೇದ ಹಾಗೂ ದೀಕ್ಷಾ ಆ್ಯಪ್‌ನಲ್ಲಿ ಈ ಗದ್ಯದ ಸಾರಾಂಶವನ್ನು ಆಲಿಸುವುದು.
* ಸಂವೇದ, ದೀಕ್ಷಾ ಆಪ್, ಯೂಟ್ಯೂಬ್ ಕ್ಯೂ.ಆರ್. ಕೋಡ್/ ಲಿಂಕ್ ಬಳಸಿ ಈ ಗದ್ಯಭಾಗದ ಸಾರಾಂಶವನ್ನು ಅರ್ಥೈಸಿಕೊಳ್ಳುವುದು.

| **ಅ) ಹೊಸ ಪದಗಳ ಪರಿಚಯ** | **ಆ) ಸ್ವಂತ ವ್ಯಾಕ್ಯದಲ್ಲಿ ಪ್ರಯೋಗ** |
|---|---|
| **ಚೆಲ್ಲಾಪಿಲ್ಲಿ** – ಅಸ್ತವ್ಯಸ್ತ<br>**ಆಕರ**– ಮೂಲ | **ಶಿಸ್ತು** – ಸೈನಿಕರು ಶಿಸ್ತಿನಿಂದ ಇರುತ್ತಾರೆ |
| **ಇ) ವಚನ ಬದಲಾಯಿಸುವುದು** | **ಈ) ಅನ್ಯ ಲಿಂಗ ಶಬ್ಧ ಬರೆಯುವುದು.** |
| **ಗಿಡ** – ಗಿಡಗಳು<br>**ತಮ್ಮಂದಿರು** – ತಮ್ಮ | **ಉದಾ:-** **ಅವನು** – ಅವಳು<br>**ಶರಣೆ** – ಶರಣ |

**ಉ) ರೂಢನಾಮ, ಅಂಕಿತನಾಮ, ಅನ್ವರ್ಥನಾಮ ಇವುಗಳಿಗೆ ಉದಾಹರಣೆಗಳನ್ನು ಪಟ್ಟಿ ಮಾಡುವುದು:**

**ಉದಾ:-** **ರೂಢನಾಮ** – ಬೆಟ್ಟ
**ಅಂಕಿತನಾಮ** – ರಾಮ
**ಅನ್ವರ್ಥನಾಮ** – ಕುರುಡ

**ಊ) ಸಜಾತಿ ಮತ್ತು ವಿಜಾತಿ ಒತ್ತಕ್ಷರಗಳ ಪದಗಳ ವರ್ಗೀಕರಣ**

**ಉದಾ:**- ಅಸ್ತ್ರ, ಹಗ್ಗ, ರಕ್ತ, ಮಕ್ಕಳು,
**ಸಜಾತಿ:**- ಹಗ್ಗ, ಮಕ್ಕಳು
**ವಿಜಾತಿ:**- ಅಸ್ತ್ರ, ರಕ್ತ

DIET CHIKKAMAGALURU

**ಪರ್ಯಾಯ ಶೈಕ್ಷಣಿಕ ಕ್ರಿಯಾಯೋಜನೆ**

**ತರಗತಿ – 6.** **ಅಭ್ಯಾಸದ ಹಾಳೆ-2 ಪುನರ್ಬಲನ ಚಟುವಟಿಕೆಗಳು** **ವಿಷಯ – ಕನ್ನಡ.**

## ಪಾಠ: 1 : ದೊಡ್ಡವರ ದಾರಿ

**ಅ) ಕೆಳಗಿನ ಚಿತ್ರವನ್ನು ವೀಕ್ಷಿಸಿ ಅದರ ಕುರಿತು ಒಂದೆರಡು ವಾಕ್ಯಗಳನ್ನು ಹೇಳುತ್ತಾ ಬರೆಯಿರಿ.**



______________________________

______________________________

______________________________

**ಆ) ಕೊಟ್ಟಿರುವ ಪದಗಳನ್ನು ಬಳಸಿ ನಿಮ್ಮದೇ ಸ್ವಂತ ವಾಕ್ಯ ರಚಿಸಿ.**

1. **ಕಾಸು :-**
2. **ರಾಷ್ಟ್ರಪತಿ:-**

**ಇ) ಮನದಲ್ಲೆ ಓದುತ್ತಾ 'ಏ' ಸ್ವರಾಕ್ಷರದ ಪದಗಳನ್ನು ಗುರುತಿಸಿ ಬರೆಯಿರಿ.**

ಗೋಪಿ ಮುಂಜಾನೆ ಬೇಗ ಏಳುವನು, ಮುಖ ತೊಳೆದು ದೇವರಿಗೆ ಕೈ ಮುಗಿಯುವನು. ಉಪಾಹಾರ ಸೇವಿಸಿ ಶಾಲೆಗೆ ಹೊರಡುವನು.

**ಈ) ಕೆಳಗಿನ ಒತ್ತಕ್ಷರ ಪದಗಳನ್ನು ಗಟ್ಟಿಯಾಗಿ ಓದುತ್ತಾ ಸಜಾತಿ ಮತ್ತು ವಿಜಾತಿಯ ಪದಗಳಾಗಿ ವರ್ಗೀಕರಿಸಿರಿ.**

ದೊಡ್ಡ, ಕತ್ತಲು, ದೃಷ್ಟಿ, ಕರ್ರಗೆ, ಸ್ವೀಕಾರ, ಚೈತ್ರ, ವಿಶ್ವಾಸ ರೇಷ್ಮೆ, ಮುಳ್ಳು, ಮೊಗ್ಗು,

| ಸಜಾತಿ, | ವಿಜಾತಿ |
|---|---|
| ________ | ________ |
| ________ | ________ |
| ________ | ________ |
| ________ | ________ |
| ________ | ________ |

**ಮಾರ್ಗದರ್ಶನ:** * ಮೇಲಿನ ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಉತ್ತರಗಳನ್ನು ಬರೆಯಲು ಅವಕಾಶ ಮಾಡಿಕೊಡುವುದು.
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.

DIET CHIKKAMAGALURU

## ಪರ್ಯಾಯ ಶೈಕ್ಷಣಿಕ ಕ್ರಿಯಾಯೋಜನೆ

**ತರಗತಿ – 6.** **ಅಭ್ಯಾಸದ ಹಾಳೆ–3 ಮೌಲ್ಯಮಾಪನ ಚಟುವಟಿಕೆ** **ವಿಷಯ – ಕನ್ನಡ.**

**ಪಾಠ: 1 : ದೊಡ್ಡವರ ದಾರಿ**

**ಅ) ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ರಾಜೇಂದ್ರ ಪ್ರಸಾದರು ತಾವು ಯಾರ ಸೇವಕ ಎಂದು ಹೇಳಿಕೊಳ್ಳುತ್ತಿದ್ದರು?

   ______________________________

2. ರಾಜೇಂದ್ರ ಪ್ರಸಾದ್ ಅವರ ವ್ಯಕ್ತಿತ್ವವನ್ನು ವಿವರಿಸಿರಿ?

   ______________________________

3. "ನೋಡಿ ಮಕ್ಕಳೇ, ಪುಸ್ತಕಗಳು ಜ್ಞಾನ ಭಂಡಾರ"? ಈ ವಾಕ್ಯವನ್ನು ಯಾರು ಯಾರಿಗೆ ಹೇಳಿದರು?

   ______________________________

**ಆ) 'ಅ' ವಿಭಾಗದ ಪದಗಳಿಗೆ 'ಆ' ವಿಭಾಗದ ಸೂಕ್ತವಾದ ಪದಗಳನ್ನು ಹೊಂದಿಸಿ.**

| | **ಅ** | | **ಆ** | |
|---|---|---|---|---|
| ಅ) | ಅಪ್ಪ | – | ಚಿಕ್ಕಪ್ಪ | ಉ : ____________ |
| ಆ) | ಅಜ್ಜಿ | – | ಶರಣೆ | ಉ : ____________ |
| ಇ) | ಶರಣ | – | ಅಮ್ಮ | ಉ : ____________ |
| ಈ) | ಚಿಕ್ಕಮ್ಮ | – | ಅಜ್ಜ | ಉ : ____________ |

**ಇ) ಮಾದರಿಯಂತೆ ವಚನ ಬದಲಾಯಿಸಿ ಬರೆಯಿರಿ.**

**ಮಾದರಿ=** ಹುಡುಗ ಆಟ ಆಡಿದನು.
ಹುಡುಗರು ಆಟವನ್ನು ಆಡಿದರು.

ಅ) ಹಳ್ಳಿಯಲ್ಲಿ ತುಂಬಾ ಮನೆ ಇದ್ದವು.

______________________________

ಆ) ಕಾಡಿನಲ್ಲಿ ಪ್ರಾಣಿಗಳು ಸಭೆ ಸೇರಲು ಯೋಚಿಸಿದವು.

______________________________

**ಈ) ಯೋಜನೆ –** ಭಾರತದ ರಾಷ್ಟ್ರಪತಿಗಳ ಭಾವಚಿತ್ರ ಮತ್ತು ಅವರ ಕಿರು ಪರಿಚಯದ ಆಲ್ಬಂ ತಯಾರಿಸಿ.

DIET CHIKKAMAGALURU

**ಪ್ರಾಂಶುಪಾಲರು, ಡಯಟ್ ಹಾಗೂ ಉಪನಿರ್ದೇಶಕರು(ಅಭಿವೃದ್ಧಿ)ರವರ ಕಾರ್ಯಾಲಯ-ಚಿಕ್ಕಮಗಳೂರು**

**ಪರ್ಯಾಯ ಶೈಕ್ಷಣಿಕ ಕ್ರಿಯಾಯೋಜನೆ**

**ತರಗತಿ – 6.** **ಅಭ್ಯಾಸದ ಹಾಳೆ-1 ಕಲಿಕಾಂಶ ಚಟುವಟಿಕೆ** **ವಿಷಯ – ಕನ್ನಡ.**

**ಪಾಠ: 3 ಕೃಷ್ಣ ಸುಧಾಮ**

ಕೃಷ್ಣ ಸುಧಾಮ-1 ಕೃಷ್ಣ ಸುಧಾಮ-2 ಕೃಷ್ಣ ಸುಧಾಮ-3

**ಸೂಚನೆಗಳು:** * ಪಠ್ಯ ಪುಸ್ತಕದ **ಕೃಷ್ಣ ಸುಧಾಮ** ಗದ್ಯಭಾಗವನ್ನು ಹಿರಿಯರ ಎದುರು ಓದಿ ಬರೆದು ಅಭ್ಯಾಸ ಮಾಡುವುದು.
* ಹೊಸ ಪದಗಳ ಅರ್ಥವನ್ನು ತಿಳಿಯುವುದು.
* ಪದಪುಂಜ, ನುಡಿಗಟ್ಟುಗಳ ಅರ್ಥವನ್ನು ಶಬ್ಧಕೋಶದ ಸಹಾಯದಿಂದ ತಿಳಿಯುವುದು.
* ಇತರ ಮಾಧ್ಯಮಗಳಲ್ಲಿನ ಜನಪದ ಕಥೆಗಳನ್ನು ಓದಿ ಅರ್ಥೈಸಿಕೊಳ್ಳುವುದು.
* ಪಠ್ಯಾಂಶವನ್ನು ಸ್ವರಭಾರ ಏರಿಳಿತಗಳಿಗನುಗುಣವಾಗಿ ಸ್ಪಷ್ಟವಾಗಿ ತಪ್ಪಿಲ್ಲದಂತೆ ಓದುವುದು.

**ಈ ಪದಗಳ ಅರ್ಥ ಓದಿ ತಿಳಿ:**

ಕಂಗಾಲಾಗು – ಕಂಗೆಡು, ತಬ್ಬಿಬ್ಬಾಗು. ವಿಧೇಯತೆ – ನಮ್ರತೆ, ಅನುಸರಿಸುವ ಗುಣ. ಪಾಂಡಿತ್ಯ – ವಿದ್ವತ್ತು. ಸ್ನೇಹ-ಗೆಳೆತನ, ಮಿತ್ರತ್ವ. ಸಂಕೋಚ – ಕುಗ್ಗುವುದು, ಮುದುಡುವುದು. ಕೃಪೆ – ದಯೆ, ಕರುಣೆ. ಆಶ್ಚರ್ಯ – ವಿಸ್ಮಯ, ಬೆರಗು. ಆಭರಣ- ಒಡವೆ. ಇಂಗಿತ – ಆಶಯ.

**ನುಡಿಗಟ್ಟು :**

ವಿಶೇಷಾರ್ಥವುಳ್ಳ ಮತ್ತು ಒಳಾರ್ಥವುಳ್ಳ ಪದಪುಂಜವನ್ನು ನುಡಿಗಟ್ಟು ಎನ್ನುವರು.

**ಉದಾ:** 1. **ಅಟ್ಟಕ್ಕೇರಿಸು** – ಹೊಗಳಿ ಹೊಗಳಿ ಉಬ್ಬಿಸು.
2. **ಗುಡ್ಡವನ್ನು ಬೆಟ್ಟ ಮಾಡು** – ಅಲ್ಪ ವಿಷಯವನ್ನು ದೊಡ್ಡದು ಮಾಡು.
3. **ಕಂಬಿ ಕೀಳು** – ಹೇಳದೆ ಕೇಳದೆ ಓಡಿ ಹೋಗು, ಪಲಾಯನ ಮಾಡು.
4. **ಗುಬ್ಬಿ ಮೇಲೆ ಬ್ರಹ್ಮಾಸ್ತ್ರ** – ಸಣ್ಣವರ ಮೇಲೆ ಬಲ ಪ್ರದರ್ಶನ.

**ಮಾರ್ಗದರ್ಶನ:** * ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಪಠ್ಯ/ ಪದ್ಯವನ್ನು ಕಲಿಯಲು ಅವಕಾಶ ಮಾಡಿಕೊಡುವುದು
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.
* ವ್ಯಾಕರಣಾಂಶದ ಹೆಚ್ಚಿನ ಮಾಹಿತಿಗಾಗಿ ಅಭ್ಯಾಸ ಪುಸ್ತಕವನ್ನು ಬಳಸುವುದು.

DIET CHIKKAMAGALURU

## ಪರ್ಯಾಯ ಶೈಕ್ಷಣಿಕ ಕ್ರಿಯಾಯೋಜನೆ

ತರಗತಿ – 6. **ಅಭ್ಯಾಸದ ಹಾಳೆ–2 ಪುನರ್ಬಲನ ಚಟುವಟಿಕೆಗಳು** ವಿಷಯ – ಕನ್ನಡ.

### ಪಾಠ: 3 ಕೃಷ್ಣ ಸುಧಾಮ

**ಅ. ಈ ಬಿಟ್ಟ ಸ್ಥಳಗಳನ್ನು ಸರಿಯಾದ ಉತ್ತರದೊಂದಿಗೆ ತುಂಬಿಸಿ**

1. ಜೀವನದಲ್ಲಿ ಬಂದದ್ದನ್ನು ಅನುಭವಿಸಲೇ ಬೇಕು ಅದೇ ______________
2. ಕೃಷ್ಣನ ಆತ್ಮೀಯ ಗೆಳೆಯ ___________
3. ದಾಯಾದಿ ಎಂದರೆ ____________.

**ಆ. ಈ ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ.**

1. **ಸಂತೋಷ:** ________________________________
2. **ಶ್ರಮಿಸು :** ________________________________
3. **ವಿಶ್ರಾಂತಿ:** ________________________________

**ಇ. ಗಾದೆಗಳನ್ನು ಪೂರ್ಣಗೊಳಿಸಿ.**

1. ವಿದ್ಯೆ ಇಲ್ಲದವನು________________________________
2. ಕೈ ಕೆಸರಾದರೆ________________________________
3. ಗುಣ ನೋಡಿ________________________________

**ಈ. ಸೂಚನೆಯಂತೆ ಬರೆಯಿರಿ.**

1. **"ನನ್ನನ್ನು ಕಂಡರೆ ಅವನಿಗೆ ಅಪಾರ ಪ್ರೀತಿ, ಸ್ನೇಹ, ಗೌರವ"**
   (ಇಲ್ಲಿ ಯಾರಿಗೆ ಯಾರನ್ನು ಕಂಡರೆ ಅಪಾರ ಪ್ರೀತಿ, ಸ್ನೇಹ ಗೌರವ)

   ಉ:________________________________________________

2. **"ನನಗೆ ಗುರುಕುಲದ ಜೀವನ ನೆನಪಾಗುತ್ತದೆ".**
   (ವಾಕ್ಯದಲ್ಲಿರುವ 'ನನಗೆ' ಎಂದರೆ ಯಾರು?)

   ಉ:________________________________________________

**ಉ. ನುಡಿಗಟ್ಟುಗಳ ಪರಿಚಯ:**

1. **ಅಟ್ಟಕ್ಕೇರಿಸು:**____________________
2. **ಕಂಬಿಕೀಳು:**__________________
3. **ಗುಬ್ಬಿ ಮೇಲೆ ಬ್ರಹ್ಮಾಸ್ತ್ರ:**____________________

**ಮಾರ್ಗದರ್ಶನ:** * ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಉತ್ತರಗಳನ್ನು ಬರೆಯಲು ಅವಕಾಶ ಮಾಡಿಕೊಡುವುದು.
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.

DIET CHIKKAMAGALURU

**ಪರ್ಯಾಯ ಶೈಕ್ಷಣಿಕ ಕ್ರಿಯಾಯೋಜನೆ**

**ತರಗತಿ – 6.** **ಅಭ್ಯಾಸದ ಹಾಳೆ–3 ಮೌಲ್ಯಮಾಪನ ಚಟುವಟಿಕೆ** **ವಿಷಯ – ಕನ್ನಡ.**

## ಪಾಠ: 3 ಕೃಷ್ಣ ಸುಧಾಮ

**1. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯಗಳಲ್ಲಿ ಉತ್ತರಿಸಿ.**

1) ಸುಧಾಮನ ಕಣ್ಣಲ್ಲಿ ನೀರು ಏಕೆ ಬಂತು?

______________________________

2) ಸುಧಾಮನ ಮನೆಯನ್ನು ಕಟ್ಟಿಸಿದವರು ಯಾರು?

______________________________

3) ಕೃಷ್ಣ–ಸುಧಾಮ ನಾಟಕವನ್ನು ಯಾವ ಕೃತಿಯಿಂದ ಆಯ್ಕೆ ಮಾಡಿಕೊಳ್ಳಲಾಗಿದೆ?

______________________________

**2. ಒಗಟು ಬಿಡಿಸಿ:**

1) ಕೂಗಿದರೆ ರಾವಣ, ಹಾರಿದರೆ ಹನುಮಂತ, ಕೂತರೆ ಮುನಿ ಹಾಗಾದರೆ ನಾನು ಯಾರು?

______________________________

2) ನೀಲಿ ಕೆರೆಯಲಿ ಬಿಳಿ ಮೀನು

______________________________

3) ಚಿಪ್ಪುಂಟು ಆಮೆಯಲ್ಲ, ಜುಟ್ಟುಂಟು ಪೂಜಾರಿಯಲ್ಲ. ಮೂರು ಕಣ್ಣುಂಟು ಹರನಲ್ಲ, ಹಾಗಾದರೆ ನಾನು ಯಾರು?

______________________________

4) ಬೆಳ್ಳಿ ಸಮುದ್ರದಲ್ಲಿ ಕಪ್ಪು ಸೂರ್ಯ

______________________________

**3. ಕೊಟ್ಟಿರುವ ಪದಗಳನ್ನು ಮಾದರಿಯಂತೆ ಬರೆಯಿರಿ.**

**ಮಾದರಿ:** ನಕ್ಷತ್ರ – ನಕ್ಷತ್ರಗಳು

1. **ಆಭರಣ** – ______________
2. **ಮಗು** – ______________
3. **ಸ್ನೇಹಿತ** – ______________
4. **ವಸ್ತು** – ______________

**4. "ಅ"ಪಟ್ಟಿಯಲ್ಲಿರುವ ಪದಗಳಿಗೆ ಸೂಕ್ತ ವಿರುದ್ಧಾರ್ಥಕ ಪದಗಳನ್ನು "ಬಿ" ಪಟ್ಟಿಯಿಂದ ಆರಿಸಿ ಬರೆಯಿರಿ.**

| "ಅ" ಪಟ್ಟಿ | | "ಬಿ" ಪಟ್ಟಿ | |
|---|---|---|---|
| ಮುಂದೆ – | ಆಗಮಿಸು– | ಅನ್ಯಾಯ, | ಅಪೂರ್ಣ |
| ಪೂರ್ಣ – | ನ್ಯಾಯ – | ಗೆಲುವು, | ನಿರ್ಗಮಿಸು |
| ಜಯ – | ಸೋಲು– | ಹಿಂದೆ, | ಅಪಜಯ |

______________________________ ______________________________

______________________________ ______________________________

______________________________ ______________________________

______________________________ ______________________________



DIET CHIKKAMAGALURU

**5. ಕರ್ತೃ, ಕರ್ಮ, ಕ್ರಿಯಾ ಪದಗಳನ್ನು ಬರೆಯಿರಿ.**

1. ಎತ್ತು ಬಂಡಿಯನ್ನು ಎಳೆಯುತ್ತದೆ.
2. ಕಾಯಿ ಮರದಿಂದ ಬೀಳುತ್ತದೆ.
3. ಗಾಂಧೀಜಿ ಅಹಿಂಸೆಯನ್ನು ಪ್ರತಿಪಾದಿಸಿದರು.
4. ಸೂರ್ಯನು ಮುಂಜಾನೆ ಉದಯಿಸುತ್ತಾನೆ.
5. ಸರಸ್ವತಿ ಶಾಲೆಗೆ ಹೋಗುತ್ತಾಳೆ.
6. ರಾಮನು ಗೆಳೆಯನನ್ನು ಮೆಚ್ಚಿದನು.
7. ಗಿಳಿಯು ಹಣ್ಣನ್ನು ತಿಂದಿತು.

| ಕರ್ತೃ | ಕರ್ಮ | ಕ್ರಿಯಾ |
|---|---|---|
| | | |
| | | |
| | | |
| | | |
| | | |
| | | |
| | | |

**ಯೋಜನೆ:**

1. ಕೃಷ್ಣ–ಸುಧಾಮರ ನಾಟಕದಲ್ಲಿ ನೀವು ಮೆಚ್ಚುವ ಪಾತ್ರ ಯಾವುದು? ಆ ಪಾತ್ರವನ್ನು ನೀವು ಮೆಚ್ಚಲು ಕಾರಣವೇನು? ಎಂಬುದರ ಬಗ್ಗೆ ಹಿರಿಯರೊಂದಿಗೆ ಚರ್ಚಿಸಿ ಬರೆಯಿರಿ.
2. 5ನೇ ತರಗತಿಯ ಕನ್ನಡ ಪಠ್ಯಪುಸ್ತಕದಲ್ಲಿ ಬರುವ ಬಿ.ವಿ ಕಾರಂತರ **"ಪಂಜರಶಾಲೆ"** ನಾಟಕವನ್ನು ಯೂ ಟ್ಯೂಬ್ ಲಿಂಕ್‌ನಲ್ಲಿ ಆಲಿಸಿ.
3. ನಿಮ್ಮ ಹಿರಿಯರ ಸಹಾಯ ಪಡೆದು ಪೌರಾಣಿಕ ನಾಟಕಗಳ ಬಗ್ಗೆ ತಿಳಿದುಕೊಳ್ಳಿ.

**ಮಾರ್ಗದರ್ಶನ:** * ಮೇಲಿನ ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಉತ್ತರಗಳನ್ನು ಬರೆಯಲು ಅವಕಾಶ ಮಾಡಿಕೊಡುವುದು.

* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.

DIET CHIKAMAGALURU

## ಪ್ರಾಂಶುಪಾಲರು, ಡಯಟ್ ಹಾಗೂ ಉಪನಿರ್ದೇಶಕರು(ಅಭಿವೃದ್ಧಿ)ರವರ ಕಾರ್ಯಾಲಯ-ಚಿಕ್ಕಮಗಳೂರು

**ಪರ್ಯಾಯ ಶೈಕ್ಷಣಿಕ ಕ್ರಿಯಾಯೋಜನೆ**

**ತರಗತಿ – 6.** **ಅಭ್ಯಾಸದ ಹಾಳೆ-1 ಕಲಿಕಾಂಶ ಚಟುವಟಿಕೆ** **ವಿಷಯ – ಕನ್ನಡ,**

**ಪಾಠ: 4 ಡಾ.ರಾಜಕುಮಾರ್**

**ಸೂಚನೆಗಳು:**
* ಪಠ್ಯಪುಸ್ತಕದ ಪಾಠ 4 ಡಾ.ರಾಜಕುಮಾರ್ ಈ ಗದ್ಯಭಾಗವನ್ನು ಸ್ಪಷ್ಟವಾಗಿ ಓದುವುದು.
* ಲೇಖಕರ ಪರಿಚಯ ಓದಿ ಅರ್ಥೈಸಿಕೊಳ್ಳುವುದು.
* ಪಾಠದಲ್ಲಿ ಬಂದಿರುವ ಹೊಸ ಪದಗಳಿಗೆ ಅರ್ಥವನ್ನು ಶಬ್ದಕೋಶದ ಸಹಾಯದಿಂದ ತಿಳಿದುಕೊಳ್ಳುವುದು.
* ಯೂಟ್ಯೂಬ್ ಲಿಂಕ್, ಸಂವೇದ ಹಾಗೂ ದೀಕ್ಷಾದಲ್ಲಿ ಈ ಗದ್ಯದ ಸಾರಾಂಶ ತಿಳಿದು ಹಿರಿಯರೊಂದಿಗೆ ಚರ್ಚಿಸುವುದು.

**ಅ) ಪದಗಳ ಅರ್ಥ ತಿಳಿಯಿರಿ:-**

1. **ವಾತ್ಸಲ್ಯ :** 2. **ಸೆಳೆತ :**

3. **ಹಸನು :** 4. **ಮಜಲು :**

**ಆ) ವ್ಯಾಕರಣಾಂಶ :**

**ತತ್ಸಮ-ತದ್ಭವ ಪದಗಳನ್ನು ಬರೆ :**

1. **ಕಾರ್ಯ –** 2. **ಹೊತ್ತಗೆ –**

3. **ಪದ್ಮ –** 4. **ಭಕ್ತಿ –**

**ಇ) ಅರ್ಥಪೂರ್ಣ ವಾಕ್ಯ ರಚನೆ:-**

1. ಆಭರಣ/ ಮನುಷ್ಯನ/ ಗುಣಗಳೇ/ ಮಾನವೀಯ ________________
2. ಪಾಠವನ್ನು/ ನಗುನಗುತ್ತ/ ಮಕ್ಕಳು/ ಕೇಳಿದರು ________________
3. ಅಭ್ಯಾಸವೇ/ ಹಾದಿ/ ಸತತ/ ಸಾಧನೆಗೆ ________________
4. ಗಮನ/ ಶುಚಿತ್ವಕ್ಕೆ/ ಹೆಚ್ಚಿನ /ಕೊಡಬೇಕು ________________

DIET CHIKKAMAGALURU

**ಪರ್ಯಾಯ ಶೈಕ್ಷಣಿಕ ಕ್ರಿಯಾಯೋಜನೆ**

ತರಗತಿ – 6. **ಅಭ್ಯಾಸದ ಹಾಳೆ–2 ಪುನರ್ಬಲನ ಚಟುವಟಿಕೆಗಳು** ವಿಷಯ – ಕನ್ನಡ.

## ಪಾಠ 4 ಡಾ.ರಾಜಕುಮಾರ್

**ಅ) ಮಾದರಿಯಂತೆ ನಾಮಪದಕ್ಕೆ ವಿಭಕ್ತಿ ಪ್ರತ್ಯಯ ಸೇರಿಸಿ:**

**ಮಾದರಿ:– ಅನ್ನು– ಸಹದೇವನನ್ನು**

**ಜಾನಕಿ– ಜಾನಕಿಯನ್ನು**

| | |
|---|---|
| 1. | ಇಂದ – |
| 2. | ಕ್ಕೆ – |
| 3. | **ಉ** – |
| 4. | ದೆಸೆಯಿಂದ |
| **5.** | ಅಲ್ಲಿ |

**ಆ) ಕೆಳಗೆ ನೀಡಿರುವ ಅದಲು ಬದಲಾದ ಅಕ್ಷರಗಳಿಂದ ಅರ್ಥಪೂರ್ಣ ಪದ ರಚಿಸಿ.**

1. ಹಿರೇಮಣಿ : ________________
2. ಗತ್ಯಅತ್ಯ : ________________
3. ಚನಾಫಸೂಕಲ : ______________
4. ತ್ರೋದ್ಯಚಿಮ : ________________
5. ತ್ಸಲ್ಯಧಾವಾರೆ : ______________

**ಇ) ಸರಿಯಾದ ಅಕ್ಷರಗಳಿಂದ ಪದಗಳನ್ನು ಪೂರ್ಣಗೊಳಿಸಿ:**

1. ಉ___ವ (ರ, ತ್ಸ, ಕ್ಷ)
2. ಕಲಾಕೇ___ರಿ (ಸ. ಕ. ದ)
3. ರಂಗ___ಮಿ (ರೂ. ಬೂ. ಭೂ)
4. ವಿ___ಗಮ (ದ್ಯಾ. ತ್ಯಾ. ನ್ಯಾ)

**ಈ) ಈ ಕೆಳಗಿನ ವಾಕ್ಯಗಳನ್ನು ಸ್ಪಷ್ಟವಾಗಿ ಓದಿ:**

1. ಕಾಗೆ ಪುಕ್ಕ ಗುಬ್ಬಿ ಪುಕ್ಕ.
2. ಸಂಪಂಗಪ್ಪನ ಮಗ ಮರಿ ಸಂಪಂಗಪ್ಪ
3. ಕಮಲಳ ಲಂಗ ಝಳಝಳ
4. ಕಪ್ಪು ಕುಂಕುಮ ಕೆಂಪು ಕುಂಕುಮ

**ಮಾರ್ಗದರ್ಶನ:** * ಮೇಲಿನ ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಉತ್ತರಗಳನ್ನು ಬರೆಯಲು ಅವಕಾಶ ಮಾಡಿಕೊಡುವುದು.
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.

DIET CHIKKAMAGALURU

**ತರಗತಿ – 6.** **ಅಭ್ಯಾಸದ ಹಾಳೆ–3 ಮೌಲ್ಯಮಾಪನ ಚಟುವಟಿಕೆ** **ವಿಷಯ – ಕನ್ನಡ.**

## ಪಾಠ 4: ಡಾ.ರಾಜಕುಮಾರ್

**ಅ) ಈ ಕೆಳಗಿನ ಪ್ರಶ್ನೆಗಳನ್ನು ಓದಿ ಉತ್ತರಿಸಿ:**

1. ಡಾ. ರಾಜ್‌ಕುಮಾರ್‌ರವರ ಹುಟ್ಟೂರು ಯಾವುದು?

_______________________________________________

2. ಡಾ. ರಾಜ್‌ಕುಮಾರ್ ಅವರ ತಂದೆ–ತಾಯಿಯ ಹೆಸರೇನು?

_______________________________________________

3. ಡಾ.ರಾಜ್‌ಕುಮಾರ್ ಪಾಠವನ್ನು ಬರೆದ ಲೇಖಕರ ಹೆಸರೇನು?

_______________________________________________

**ಆ) ಹೊಂದಿಸಿ ಬರೆಯಿರಿ:**

ಮೊದಲ ಹೆಸರು - ಜೀವನಚೈತ್ರ ______________

ಮೊದಲ ಚಿತ್ರ – ರಾಜ್‌ಕುಮಾರ್ ______________

ರಾಷ್ಟ್ರ ಪ್ರಶಸ್ತಿ – ಮುತ್ತುರಾಜ ______________

ಬದಲಾದ ಹೆಸರು – ಬೇಡರ ಕಣ್ಣಪ್ಪ ______________


**ಇ) ಡಾ. ರಾಜ್‌ಕುಮಾರ್ ಅಭಿನಯಿಸಿದ ಚಲನಚಿತ್ರಗಳನ್ನು ಈ ಕೆಳಗೆ ನೀಡಲಾಗಿದೆ. ಅವುಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ.**

| | |
|---|---|
| ಗಂಧದ ಗುಡಿ | ಸೂತ್ರಧಾರ |
| ರಾಮಾಚಾರಿ | ಮುತ್ತಿನ ಹಾರ |
| ಜೀವನಚೈತ್ರ | ಭಕ್ತ ಕುಂಬಾರ |
| ಕೋಟಿಗೊಬ್ಬ | ದೇವತಾ ಮನುಷ್ಯ |
| ಕಸ್ತೂರಿ ನಿವಾಸ | |

_______________________________________________

_______________________________________________

**ಈ) ಈ ಭಿತ್ತಿ ಪತ್ರದಲ್ಲಿರುವ ಮಾಹಿತಿಯನ್ನು ಓದಿ ಉತ್ತರಿಸಿ.**




1. ಈ ಭಿತ್ತಿ ಪತ್ರವು ಯಾವ ಕಾರ್ಯಕ್ರಮಕ್ಕೆ ಸಂಬಂಧಪಟ್ಟಿದೆ?

_______________________________________________

2. ಪಲ್ಸ್ ಪೋಲಿಯೋ ಲಸಿಕೆಯನ್ನು ಎಷ್ಟು ಸುತ್ತಿನಲ್ಲಿ ಹಾಕಲಾಗುತ್ತಿದೆ?

_______________________________________________

3. ಈ ಭಿತ್ತಿ ಪತ್ರವನ್ನು ಯಾವ ಇಲಾಖೆಯಿಂದ ಪ್ರಕಟಿಸಲಾಗಿದೆ?

_______________________________________________

DIET CHIKKAMAGALURU

**ಪರ್ಯಾಯ ಶೈಕ್ಷಣಿಕ ಕ್ರಿಯಾಯೋಜನೆ**

**ತರಗತಿ – 6** **ಅಭ್ಯಾಸದ ಹಾಳೆ-1 ಕಲಿಕಾಂಶ ಚಟುವಟಿಕೆ** **ವಿಷಯ – ಕನ್ನಡ,**

## ಪದ್ಯ : 1. ಬೇಸಿಗೆ

**ಸೂಚನೆಗಳು:**
* ಪದ್ಯವನ್ನು ಮೊದಲು ಸ್ಪಷ್ಟವಾಗಿ ಹಾಡುವುದು.
* ಎಲ್ಲಾ ಪದಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದು.
* ಪದಗಳ ಅರ್ಥವನ್ನು ಗಮನಿಸುವುದು.
* ಹೊಸ ಪದಗಳ ಅರ್ಥವನ್ನು ಲಭ್ಯ ಅರ್ಥಕೋಶ(ಡಿಕ್ಷನರಿ)ದಲ್ಲಿ ಪತ್ತೆ ಹಚ್ಚುವುದು.
* ಸ್ವಂತ ರಾಗದಲ್ಲಿ ಹಾಡಲು ಪ್ರಯತ್ನಿಸುವುದು.
* ನೀಡಿರುವ ಕ್ಯೂ.ಆರ್. ಕೋಡ್/ ಲಿಂಕ್‌ನಲ್ಲಿ ಈಗಾಗಲೇ ಹಾಡಿರುವ ಪದ್ಯವನ್ನು ಆಲಿಸುವುದು.
* ಮನೆಯಲ್ಲಿ ಹಿರಿಯರ ಎದುರು ಹಾಡುವುದು.
* ಪಠ್ಯಪುಸ್ತಕ ಕಲಿಕಾಂಶದ 'ಬೇಸಿಗೆ' ಭಾಗವನ್ನು ಬಳಸುವುದು.

**ಪದಗಳ ಅರ್ಥ:**

ಸಜಾ – ಶಿಕ್ಷೆ,
ರವಿ – ಭಾನು, ಸೂರ್ಯ, ನೇಸರ,
ಪೋಷಕ – ಸಲಹುವಾತ
ಊಡು – ಉಣಿಸು, ತಿನ್ನಿಸು,
ಸಂಭ್ರಮ – ಉತ್ಸಾಹ, ಧನ್ಯತೆ-ಸಂತೃಪ್ತಿ.
ಮಹಿಮೆ – ಹಿರಿಮೆ, ಮಹತ್ವ
ಹಳಿ – ದೂಷಿಸು, ನಿಂದಿಸು,
ತೆಗಳು – ಹೀಯಾಳಿಸು, ನಿಂದಿಸು
ಬಿರು-ರಭಸ,

**ಈ ಪದಗಳನ್ನು ಗಮನವಿಟ್ಟು ಓದಿ ಅರ್ಥ ಗ್ರಹಿಸಿ:**

| | |
|---|---|
| ವರುಣ- ಮಳೆದೇವತೆ | ವರ್ಣ-ಬಣ್ಣ, ಅಕ್ಷರ. |
| ಕೃತಜ್ಞತೆ-ಉಪಕಾರ ಸ್ಮರಣೆ ಇರುವ | ಕೃತಘ್ನತೆ- ಉಪಕಾರ ಸ್ಮರಣೆ ಇಲ್ಲದ. |
| ವಂದಿಸು-ನಮಸ್ಕರಿಸು | ಹೊಂದಿಸು- ಜೋಡಿಸು |
| ಅರ್ತಿ-ಪ್ರೀತಿ | ಅರ್ಥಿ- ಬೇಡುವವರು |
| ಪಾವನ- ಪವಿತ್ರ | ಪವನ- ಗಾಳಿ |
| ಎಲರು-ಗಾಳಿ | ಎಲ್ಲರೂ-ಸರ್ವರು |
| ಆಡು-ಆಟ, ಮೇಕೆ | ಹಾಡು- ಗಾಯನ |

**ಮಾರ್ಗದರ್ಶನ:** * ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಪಠ್ಯ/ ಪದ್ಯವನ್ನು ಕಲಿಯಲು ಅವಕಾಶ ಮಾಡಿಕೊಡುವುದು
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.
* ವ್ಯಾಕರಣಾಂಶದ ಹೆಚ್ಚಿನ ಮಾಹಿತಿಗಾಗಿ ಅಭ್ಯಾಸ ಪುಸ್ತಕವನ್ನು ಬಳಸುವುದು.

DIET CHIKKAMAGALURU

## ಪರ್ಯಾಯ ಶೈಕ್ಷಣಿಕ ಕ್ರಿಯಾಯೋಜನೆ

ತರಗತಿ – 6. **ಅಭ್ಯಾಸದ ಹಾಳೆ–2 ಪುನರ್ಬಲನ ಚಟುವಟಿಕೆಗಳು** ವಿಷಯ – ಕನ್ನಡ.

### ಪದ್ಯ : 1. ಬೇಸಿಗೆ

**ಅ) ಕೆಳಗೆ ನೀಡಿರುವ ಸುಳಿವು ಪದಗಳನ್ನು ಬಳಸಿಕೊಂಡು ಚುಟುಕನ್ನು ರಚಿಸಿ:**

**ಬಾನು, ಬಣ್ಣ, ಚಳಿ, ಚಂದ್ರ, ಹಿತ, ಒಲವು**

______________________________

______________________________

______________________________

**ಆ) ಕೆಳಗಿನ ಪದಗಳಲ್ಲಿರುವ ಅಕ್ಷರಗಳನ್ನು ಬಿಡಿಸಿ ಬರೆಯಿರಿ:**

1. ಮಹಿಮೆ = ______________________
2. ಪಾಠ ಶಾಲೆ = ______________________
3. ಗುಡಿಸಲು = ______________________
4. ಹೊಗಳಿ = ______________________

**ಇ) ಕೆಳಗೆ ನೀಡಿರುವ ಪದಗಳಿಗೆ ಅರ್ಥವನ್ನು ಬರೆಯಿರಿ.**

1. ವರುಣ: __________ 4. ವರ್ಣ :__________
2. ಪವನ: __________ 5. ಹೊಂದಿಸು :__________
3. ಹಾಡು:__________ 6. ವಂದಿಸು :__________

**ಈ) ಪ್ರಾಸಪದಗಳನ್ನು ಗುರುತಿಸಿ ಹೊಂದಿಸಿ ಬರೆಯಿರಿ.**

**ರಜಾ, ಗದ್ಯ, ತಾಪ, ಇಷ್ಟ, ಗೂಡು, ಗುಬ್ಬಿ ವಕ್ರ, ಮರ**

__________ __________

__________ __________

__________ __________

__________ __________

**ಬರ, ಸುಬ್ಬಿ, ಚಕ್ರ, ಕೋಪ, ಪದ್ಯ, ಸಜಾ, ಕಷ್ಟ, ನಾಡು**

**ಮಾರ್ಗದರ್ಶನ:** * ಮೇಲಿನ ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಉತ್ತರಗಳನ್ನು ಬರೆಯಲು ಅವಕಾಶ ಮಾಡಿಕೊಡುವುದು.

* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.

DIET CHIKKAMAGALURU

**ಪರ್ಯಾಯ ಶೈಕ್ಷಣಿಕ ಕ್ರಿಯಾಯೋಜನೆ**

**ತರಗತಿ – 6.** **ಅಭ್ಯಾಸದ ಹಾಳೆ–3 ಮೌಲ್ಯಮಾಪನ ಚಟುವಟಿಕೆ** **ವಿಷಯ – ಕನ್ನಡ.**

**ಪದ್ಯ : 1. ಬೇಸಿಗೆ**

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಸೂರ್ಯ ಏಕೆ ದುಡಿಯುತ್ತಾನೆ?

______________________________

2. ಭೂಮಿಯ ಪೋಷಕ ಯಾರು?

______________________________

3. ಸೂರ್ಯ ಮರೆಯದೆ ಯಾವ ಕರ್ತವ್ಯ ಮಾಡುವನು?

______________________________

4. ಬಿರು ಬಿಸಿಲಿಗೆ ಯಾವುದು ಕಂಗಾಲಾಗಿಲ್ಲ?

______________________________

**ಆ) ಈ ಕೆಳಗಿನ ಪದಗಳಿಗೆ ಸ್ವಂತ ವಾಕ್ಯ ರಚಿಸಿ.**

1. **ಪೋಷಕರು:** ______________________________
2. **ಕರ್ತವ್ಯ:** ______________________________
3. **ಹೊಗಳು:** ______________________________

**ಇ) ಮಾದರಿಯಂತೆ ಪದ ಬಳ್ಳಿ ರಚಿಸಿ:**

**ಮಾದರಿ: ವನ–ನವಿಲು–ಲುಂಬಿನಿ–ನಿಜ–ಜಗಲಿ**

1. **ಮರ :** ______________________________
2. **ಜನಕ :** ______________________________
3. **ವನಜ :** ______________________________

**ಈ) ಕೆಳಗೆ ನೀಡಿರುವ ನಾಲಿಗೆ ಸುರುಳಿಗಳನ್ನು ಗಟ್ಟಿಯಾಗಿ ಓದುತ್ತಾ ಬರೆಯಿರಿ:**

1. ಕಪ್ಪು ಕುಂಕುಮ ಕೆಂಪು ಕುಂಕುಮ ______________________
2. ಕಾಗೆ ಪುಕ್ಕ ಗುಬ್ಬಿ ಪುಕ್ಕ ______________________
3. ತರೀಕೆರೆ ಏರಿ ಮೇಲೆ ಮೂರು ಕರಿ ಕುರಿಮರಿ ಮೇಯುತ್ತಿತ್ತು.

**ಉ) ಬೇಸಿಗೆ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ನೋಟ್ ಪುಸ್ತಕದಲ್ಲಿ ಬರೆ.**

**ಊ) ಯೋಜನೆ : ಪ್ರಕೃತಿಯ ಚಿತ್ರ ಬರೆದು ಬಣ್ಣ ಹಚ್ಚು.**

**ಮಾರ್ಗದರ್ಶನ:** * ಮೇಲಿನ ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಉತ್ತರಗಳನ್ನು ಬರೆಯಲು ಅವಕಾಶ ಮಾಡಿಕೊಡುವುದು.
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.

DIET CHIKKAMAGALURU

ತರಗತಿ – 6. **ಅಭ್ಯಾಸದ ಹಾಳೆ–1 ಕಲಿಕಾಂಶ ಚಟುವಟಿಕೆ** ವಿಷಯ – ಕನ್ನಡ.

**ಪದ್ಯ : 2 ಮಂಗಳ ಗ್ರಹದಲ್ಲಿ ಪುಟ್ಟಿ**

**ಸೂಚನೆಗಳು:**
* ಪದ್ಯವನ್ನು ಮೊದಲು ಸ್ಪಷ್ಟವಾಗಿ ಹಾಡುವುದು.
* ಎಲ್ಲಾ ಪದಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದು.
* ನೀಡಿರುವ ಹೊಸಪದಗಳ ಅರ್ಥವನ್ನು ಗಮನಿಸುವುದು.
* ಲಭ್ಯ ಅರ್ಥಕೋಶ(ಡಿಕ್ಷನರಿ)ದಲ್ಲಿ ಪತ್ತೆ ಹಚ್ಚುವುದು.
* ಸ್ವಂತ ರಾಗದಲ್ಲಿ ಹಾಡಲು ಪ್ರಯತ್ನಿಸುವುದು.
* ನೀಡಿರುವ ಲಿಂಕ್‌ನಲ್ಲಿ ಈಗಾಗಲೇ ಹಾಡಿರುವ ಪದ್ಯವನ್ನು ಆಲಿಸುವುದು.
* ಮನೆಯಲ್ಲಿ ಹಿರಿಯರ ಎದುರು ಹಾಡಿ ತೋರಿಸುವುದು.
* ಪಠ್ಯ ಪುಸ್ತಕ ಕಲಿಕಾಂಶದ ಭಾಗವನ್ನು ಬಳಸುವುದು.

**1. ದ್ವಿರುಕ್ತಿ:**

**ಕೆಳಗಿನ ವಾಕ್ಯಗಳನ್ನು ಗಮನಿಸಿರಿ:**
* ಶಿಕ್ಷಕರು ಮತ್ತೆ ಮತ್ತೆ ವಿವರಣೆ ನೀಡಿದರು.
* ಷರೀಫನು ನಗುತ್ತ ನಗುತ್ತ ಮಾತನಾಡಿದನು.

ವಾಕ್ಯಗಳಲ್ಲಿ 'ಮತ್ತೆ', 'ನಗುತ್ತ' ಎಂಬ ಪದಗಳು ಎರಡೆರಡು ಬಾರಿ ಬಳಕೆಯಾಗಿವೆ. ಇವುಗಳನ್ನು **'ದ್ವಿರುಕ್ತಿ'** ಎನ್ನುವರು.

**ಉದಾ:** 'ಮತ್ತೆ ಮತ್ತೆ', 'ಬೇಗಬೇಗ', 'ದೊಡ್ಡದೊಡ್ಡ'

**2. ಜೋಡು ನುಡಿ:–**

**ಕೆಳಗಿನ ವಾಕ್ಯಗಳನ್ನು ಗಮನಿಸಿರಿ :**

"ಚಿಕ್ಕ ಮಕ್ಕಳಿಗೆ ವೇಷಭೂಷಣಗಳನ್ನು ನಾವು ತೊಡಿಸುತ್ತೇವೆ" ಎಂದನು ಪಿಂಟೋ.
ಉಪವಾಸದ ರಾತ್ರಿ ಹಣ್ಣುಹಂಪಲು ತಿನ್ನುತ್ತಾರೆ.
ವಾಕ್ಯಗಳಲ್ಲಿ 'ವೇಷಭೂಷಣ', 'ಹಣ್ಣು ಹಂಪಲು' – ಈ ಪದಗಳಲ್ಲಿ ಎರಡು ಬೇರೆ ಬೇರೆ ಪದಗಳಿದ್ದು ಅವು ಜೊತೆ ಜೊತೆಯಾಗಿ ಬಳಕೆಯಾಗಿವೆ.

**ಉದಾ:** 'ನೋವುನಲಿವು,' 'ಊರುಕೇರಿ'

---

**ಮಾರ್ಗದರ್ಶನ:** * ಮೇಲಿನ ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಉತ್ತರಗಳನ್ನು ಬರೆಯಲು ಅವಕಾಶ ಮಾಡಿಕೊಡುವುದು.
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು

---

DIET CHIKKAMAGALURU

**ತರಗತಿ – 6.** **ಅಭ್ಯಾಸದ ಹಾಳೆ–2 ಪುನರ್ಬಲನ ಚಟುವಟಿಕೆಗಳು** **ವಿಷಯ – ಕನ್ನಡ.**

## ಪದ್ಯ : 2 ಮಂಗಳ ಗ್ರಹದಲ್ಲಿ ಪುಟ್ಟಿ

**ಅ) ದ್ವಿರುಕ್ತಿ ಮತ್ತು ಜೋಡುನುಡಿ ಪದಗಳನ್ನು ಆರಿಸಿ ಬರೆಯಿರಿ:**

ದವಸ ಧಾನ್ಯ, ಬೇಗ ಬೇಗ, ಬನ್ನಿ ಬನ್ನಿ, ಹಣ್ಣು ಹಂಪಲು, ದೊಡ್ಡ ದೊಡ್ಡ, ಆಸ್ತಿ–ಪಾಸ್ತಿ, ಕೇಳಿ ಕೇಳಿ, ಆಳು–ಕಾಳು, ಹಾದಿ ಬೀದಿ, ತಿಂಡಿ ತಿನಿಸು, ಸಾಲು ಸಾಲು, ಮನೆ ಮಠ, ನಗುನಗುತ್ತ

| ದ್ವಿರುಕ್ತಿ | ಜೋಡು ನುಡಿ |
|---|---|
| | |

**ಆ) ಸೂಕ್ತ ಉತ್ತರವನ್ನು ಆರಿಸಿ ಬಿಟ್ಟ ಸ್ಥಳದಲ್ಲಿ ಬರೆಯಿರಿ:**

1) ಹಂಪಣ್ಣನು ____________ ಹೆಜ್ಜೆ ಹಾಕಿದನು.
2) ಮಳೆಯ ಹನಿಗಳು ____________ಬಿದ್ದವು.
3) ನೀರು ____________ ಎಂದು ಹರಿಯಿತು.
4) ಗಾಳಿಯು ____________ ಬೀಸಿತು.

ಸುಯ್ಯನೆ, ಪಟಪಟನೆ, ಸರಸರನೆ, ಜುಳುಜುಳು, ಗರಗರ

**ಇ) ಕೊಟ್ಟಿರುವ ವಾಕ್ಯವನ್ನು ಗಮನಿಸಿ ಅದರಲ್ಲಿರುವ ಗುಣವಾಚಕ ಮತ್ತು ಸಂಖ್ಯಾವಾಚಕಗಳನ್ನು ಗುರುತಿಸಿ ಬರೆಯಿರಿ:**

1) ವಿವೇಕನಿಗೆ ಅಪಾರ ಬುದ್ಧಿವಂತಿಕೆಯಿದೆ. ____________, ____________
2) ರಾಜುವಿನ ಊರಿನಲ್ಲಿ ನೂರು ಎತ್ತುಗಳಿವೆ.____________, ____________
3) ಪುಟ್ಟಿಯು ಕೆಂಪು ಲಂಗವನ್ನು ಧರಿಸಿದ್ದಳು. ____________, ____________
4) ಒಂದು ದಿನ ಇದ್ದಕ್ಕಿದ್ದಂತೆ ಪುಟ್ಟಿಗೆ ರೆಕ್ಕೆ ಬಂದಿತ್ತು. ____________, ____________
5) ರಾಮನದು ದೊಡ್ಡ ಮನೆ. ____________, ____________
6) ಸೀತಾಳ ಮನೆ ಶಾಲೆಯಿಂದ ನಾಲ್ಕು ಕಿ.ಮೀ ದೂರದಲ್ಲಿ ಇದೆ.____________, ____________

**ಈ) ಮಾದರಿಯಂತೆ ವಾಕ್ಯಗಳನ್ನು ರಚಿಸಿ:**

ಮಾದರಿ:– ಅನ್ನು– ಅರುಣನು ಮರವನ್ನು ಏರಿದನು.

1) ಉ : ____________
2) ಇಂದ : ____________
3) ಅಲ್ಲಿ : ____________
4) ದೆಸೆಯಿಂದ : ____________

**ಮಾರ್ಗದರ್ಶನ:** * ಮೇಲಿನ ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಉತ್ತರಗಳನ್ನು ಬರೆಯಲು ಅವಕಾಶ ಮಾಡಿಕೊಡುವುದು.
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.

DIET CHIKKAMAGALURU

## ಪದ್ಯ : 2 ಮಂಗಳ ಗ್ರಹದಲ್ಲಿ ಪುಟ್ಟಿ

**ಅ) ಬಿಟ್ಟ ಸ್ಥಳ ತುಂಬಿರಿ:**

1) ಒಂದು ದಿನ ಇದ್ದಕ್ಕಿದ್ದಂತೆ ಪುಟ್ಟಿಗೆ ______________ ಬಂದಿತ್ತು.
2) ಹಾರುತ ತೇಲುತ ಮುಂದಕೆ ಸಾಗಿ ಚಂದ್ರನ ______________ ಸೇರಿದಳು.
3) ಹಸಿರನು ಅಳಿಸದೆ ಗಿಡ ಮರ ಬೆಳೆಸಿ ಉಳಿಸುವೆ ಎಂದಳು ಈ ____________________

**ಆ) ಒಂದು ವಾಕ್ಯದಲ್ಲಿ ಉತ್ತರಿಸಿ:**

1) ಪುಟ್ಟಿಗೆ ಯಾರ ಹಾಗೆ ಹಾರುವ ಮನಸ್ಸಿತ್ತು?

________________________________________

2) ಪುಟ್ಟಿ ಯೋಗಿಗೆ ಏನೆಂದು ಕೇಳಿದಳು?

________________________________________

3) ಮಂಗಳ ಗ್ರಹದಲ್ಲಿ ಬರ ಏಕೆ ಬಂದಿತು?

________________________________________

4) ಚಂದ್ರನ ಬಿಟ್ಟು ಮೇಲೆ ಹಾರಿದ ಪುಟ್ಟಿ ಎಲ್ಲಿಗೆ ಸೇರಿದಳು?

________________________________________

5) ಪ್ರಸ್ತುತ ಪದ್ಯವನ್ನು ಯಾವ ಕೃತಿಯಿಂದ ಆಯ್ಕೆ ಮಾಡಿಕೊಳ್ಳಲಾಗಿದೆ?

________________________________________

**ಇ) ಪದ್ಯ ಭಾಗವನ್ನು ಪೂರ್ಣಗೊಳಿಸಿ:**

ಮಳೆ ಬೆಳೆ____________________

______________________________

______________________________

______________________ಇದೇ ಗತಿ

**ಈ) ದೂರದರ್ಶನದಲ್ಲಿ ಪ್ರಸಾರವಾಗುವ ವಿವಿಧ ಸಂಭಾಷಣೆ, ಚರ್ಚೆಗಳನ್ನು ಆಲಿಸಿ ಅರ್ಥೈಸಿಕೊಳ್ಳುವುದು.**

**ಮಾರ್ಗದರ್ಶನ:** * ಮೇಲಿನ ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಉತ್ತರಗಳನ್ನು ಬರೆಯಲು ಅವಕಾಶ ಮಾಡಿಕೊಡುವುದು.
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.

DIET CHIKKAMAGALURU

ತರಗತಿ – 6 | **ಅಭ್ಯಾಸದ ಹಾಳೆ–1 ಕಲಿಕಾಂಶ ಚಟುವಟಿಕೆ** | ವಿಷಯ – ಕನ್ನಡ.

**ಪಾಠ: 2: ಗಂಧರ್ವ ಸೇನ**

**ಸೂಚನೆಗಳು:** * ಪಠ್ಯ ಪುಸ್ತಕದ **ಗಂಧರ್ವ ಸೇನ** ಗದ್ಯ ಭಾಗವನ್ನು ಹಿರಿಯರ ಎದುರು ಓದಿ ಬರೆದು ಅಭ್ಯಾಸ ಮಾಡುವುದು.
* ಹೊಸ ಪದಗಳ ಅರ್ಥವನ್ನು ತಿಳಿಯುವುದು.
* ಪದಪುಂಜ, ನುಡಿಗಟ್ಟುಗಳ ಅರ್ಥವನ್ನು ಶಬ್ಧಕೋಶದ ಸಹಾಯದಿಂದ ತಿಳಿಯುವುದು.
* ಇತರ ಮಾಧ್ಯಮಗಳಲ್ಲಿನ ಜನಪದ ಕಥೆಗಳನ್ನು ಓದಿ ಅರ್ಥೈಸಿಕೊಳ್ಳುವುದು.
* ಪಠ್ಯಾಂಶವನ್ನು ಸ್ವರಭಾರ ಏರಿಳಿತಗಳಿಗನುಗುಣವಾಗಿ ಸ್ಪಷ್ಟವಾಗಿ ತಪ್ಪಿಲ್ಲದಂತೆ ಓದುವುದು.

**ಪದಗಳ ಅರ್ಥ ತಿಳಿಯಿರಿ:**

ಒಡ್ಡೋಲಗ – ರಾಜಸಭೆ
ಶೋಕ – ಅಳಲು

**ವಿವರ ತಿಳಿಯಿರಿ:**

ಕಾಲಿಗೆ ಬುದ್ದಿ ಹೇಳು – ಫಲಾಯನ ಮಾಡು
ಮಾರ್ನುಡಿ – ಪ್ರತಿಯಾಗಿ ಮಾತನಾಡು.

**ವ್ಯಾಕರಣಾಂಶ:–**

ಒಗಟುಗಳು:

**ಉದಾ:** ದಾಸ್ ಬುರುಡೆ, ದೌಲತ್ ಬುರುಡೆ ಲೋಕಕ್ಕೆಲ್ಲಾ ಎರಡೇ ಬುರುಡೆ–**ಸೂರ್ಯ, ಚಂದ್ರ**

ಲಿಂಗಗಳು: ಸ್ತ್ರೀಲಿಂಗ, ಪುಲ್ಲಿಂಗ, ನಪುಂಸಕ ಲಿಂಗ

ವಚನಗಳು: ಏಕವಚನ & ಬಹುವಚನ

ಉದಾ: ಮನೆ–ಮನೆಗಳು

ನಾಮಪದಗಳ ಪ್ರಕಾರಗಳು:

ರೂಢನಾಮ, ಅಂಕಿತನಾಮ, ಅನ್ವರ್ಥನಾಮ

**ಉದಾ:** **ನದಿ** **ರಾಮ** **ಕಿವುಡ**

**ಮಾರ್ಗದರ್ಶನ:** * ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಪಠ್ಯ/ ಪದ್ಯವನ್ನು ಕಲಿಯಲು ಅವಕಾಶ ಮಾಡಿಕೊಡುವುದು.
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.
* ವ್ಯಾಕರಣಾಂಶದ ಹೆಚ್ಚಿನ ಮಾಹಿತಿಗಾಗಿ ಅಭ್ಯಾಸ ಪುಸ್ತಕವನ್ನು ಬಳಸುವುದು.

DIET CHIKKAMAGALURU

## ಪಾಠ: 2: ಗಂಧರ್ವ ಸೇನ

**ಅ) ಕೆಳಗಿನ ಪದಗಳ ಅರ್ಥವನ್ನು ಶಬ್ಧಕೋಶದ ಸಹಾಯದಿಂದ ಹುಡುಕಿ ಬರೆಯಿರಿ:**

1) ನಿಟ್ಟುಸಿರು

______________________________

2) ಮಾರ್ನುಡಿ

______________________________

3) ಉದ್ಗರಿಸು

______________________________

**ಆ) ಈ ಕೆಳಕಂಡ ನುಡಿಗಟ್ಟುಗಳನ್ನು ಬಿಡಿಸಿ ಸ್ವಂತ ವಾಕ್ಯ ರಚಿಸಿ:**

1) ಮೂಗು ತೂರಿಸು: ______________________________

2) ಕಾಲಿಗೆ ಬುದ್ಧಿ ಹೇಳು: ______________________________

**ಇ) ಈ ಕೆಳಗಿನ ಗಾದೆ ಮಾತುಗಳನ್ನು ಪೂರ್ಣಗೊಳಿಸಿ ಬರೆಯಿರಿ:**

1. ಆಳಾಗಿ ದುಡಿ:–______________________
2. ಒಗ್ಗಟ್ಟಿನಲ್ಲಿ:– ______________________
3. ಕೈ ಕೆಸರಾದರೆ:– ______________________

**ಈ) ಒಗಟು ಬಿಡಿಸಿ ಬರೆಯಿರಿ:**

ಕೂಗಿದರೆ ರಾವಣ, ಹಾರಿದರೆ ಹನುಮಂತ, ಕೂತರೆ ಮುನಿ______________________

ಗಿರಗಿರ ತಿರುಗುತ್ತೆ ಸುಸ್ತಾಗಿ ಬೀಳುತ್ತೆ ______________________

ಚಿಕ್ಕ ಮನೆಗೆ ಚಿನ್ನದ ಬೀಗ ______________________

**ಉ) ಕೊಟ್ಟಿರುವ ಪದಗಳನ್ನು ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕ ಲಿಂಗಗಳಾಗಿ ವಿಂಗಡಿಸಿ ಬರೆಯಿರಿ:**

ಮಗ, ಕೃಷ್ಣ, ಹಾಲು, ಬುಗುರಿ, ಒಡೆಯ, ಕಂಸ, ರೋಹಿಣಿ, ಯಶೋಧೆ

| ಪುಲ್ಲಿಂಗ | ಸ್ತ್ರೀಲಿಂಗ | ನಪುಂಸಕ ಲಿಂಗ |
|---|---|---|
| | | |
| | | |
| | | |

**ಊ) ಕೆಳಗಿನ ಪದಗಳಿಗೆ ಸರಿಹೊಂದುವ ಬಹುವಚನ ಪದಗಳನ್ನು ಬರೆಯಿರಿ:**

ನದಿ –

ಮಗು –

ಹುಡುಗ –

ಅಕ್ಕ –

**ಮಾರ್ಗದರ್ಶನ:** * ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಉತ್ತರಗಳನ್ನು ಬರೆಯಲು ಅವಕಾಶ ಮಾಡಿಕೊಡುವುದು.
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.

DIET CHIKKAMAGALURU

ತರಗತಿ – 6. **ಅಭ್ಯಾಸದ ಹಾಳೆ–3 ಮೌಲ್ಯಮಾಪನ ಚಟುವಟಿಕೆ** ವಿಷಯ – ಕನ್ನಡ.

**ಪಾಠ: 2: ಗಂಧರ್ವ ಸೇನ**

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದೆರೆಡು ವಾಕ್ಯಗಳಲ್ಲಿ ಉತ್ತರಿಸಿ:**

1) ಗಂಧರ್ವ ಸೇನ ಯಾರು?

______________________________

2) ರಾಣಿಯರು ನಗಲು ಕಾರಣವೇನು?

______________________________

3) ಗಂಧರ್ವಸೇನ ಯಾರು ಎಂಬುದನ್ನು ತಿಳಿಯಲು ಮಂತ್ರಿಯು ಮಾಡಿದ ಪ್ರಯತ್ನಗಳೇನು?

______________________________

______________________________

**ಆ) ಕೆಳಗಿನ ಗಾದೆ ಮಾತುಗಳನ್ನು ಅರ್ಥಪೂರ್ಣವಾಗಿ ಜೋಡಿಸಿ ಬರೆಯಿರಿ.**

ಬರೆ ಹಾಕಿದಂತೆ/ ಎಮ್ಮೆಗೆ/ ಬಂದರೆ/ ಜ್ವರ/ ಎತ್ತಿಗೆ

______________________________

ಗೋಡೆ/ ಇಟ್ಟ ಹಾಗೆ/ ಮೇಲೆ/ ದೀಪ/ಅಡ್ಡ

______________________________

**ಇ) ಕೆಳಗಿನ ಗಾದೆ ಮಾತನ್ನು ವಿಸ್ತರಿಸಿ ಬರೆದು ಗಟ್ಟಿಯಾಗಿ ಓದಿ.**

**ಒಗ್ಗಟ್ಟಿನಲ್ಲಿ ಬಲವಿದೆ.**

______________________________

______________________________

______________________________

______________________________

______________________________

**ನಿಯೋಜಿತ ಕಾರ್ಯ;**

**ಯೋಜನೆ:**

1. ಯಾವುದಾದರೊಂದು ಜನಪದ ಕಥೆಯನ್ನು ನಿಮ್ಮ ಹಿರಿಯರಿಂದ ಕೇಳಿ ಬರೆದು ಗಟ್ಟಿಯಾಗಿ ಓದಿ.
2. ಯಾವುದಾದರು 10 ಗಾದೆ ಮಾತುಗಳನ್ನು ಸಂಗ್ರಹಿಸಿ ಬರೆದು ಗಟ್ಟಿಯಾಗಿ ಓದಿ.
3. ಯಾವುದಾದರೂ 2 ಒಗಟುಗಳನ್ನು ನೀವೇ ಸ್ವತಃ ರಚಿಸಲು ಪ್ರಯತ್ನಿಸಿ.

**ಮಾರ್ಗದರ್ಶನ:** * ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಉತ್ತರಗಳನ್ನು ಬರೆಯಲು ಅವಕಾಶ ಮಾಡಿಕೊಡುವುದು.
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.

DIET CHIKKAMAGALURU